

# ಮದುವೆಗಳ ಮರಣೋತ್ತರ ಪರೀಕ್ಷೆ

■ ಶಿವಕುಮಾರ ಮಾವಲಿ
ಕಲೆ: ಭಾಸ್ಕರ್

ಮದುವೆಗಳ ಮರಣೋತ್ತರ ಪರೀಕ್ಷೆ
ನಮ್ಮ ಬಾಳಿಗೆ ಸಾಕ್ಷಿ ಹೋಳಿಗೆ
ನಾನು ಕಣಕ, ನೀನು ಹೂರ್ಣ
ನಿನ್ನನಪ್ಪೆ ನಾನು ಪೂರ್ಣ
ನಾನಿಲ್ಲದೆ ನೀನು ಚೂರ್ಣ
ನೀನಿಲ್ಲದೆ ನಾನು ಶೀರ್ಣ
ಎರಡು ಹೆಸರು, ಒಂದೆ ಉಸಿರು
ನಾನು ಪತಿ, ನೀನು ಸತಿ
ಒಂದೇ ದಂಪತಿ!

— ಕುವೆಂಪು

ವೆಡ್ಡಿಂಗ್ ಕಾರ್ಡಿಗೆ ಈ ಪದ್ಯನ ಫೈನಲ್ ಮಾಡಿದಿನಿ ಚಿನ್ನೂ. **I hope you like it** ಎಂಬ ಮೆಸೇಜಿಗೆ **That's fantastic kano** ಎಂದು ರಿಪ್ಲೈ ಮಾಡಿದ ಸಹನಾ, 'ನಾನ್ ಲೊಕೇಶನ್ ರೀಚ್ ಆಗಿ ಐದ್ ನಿಮಿಷ ಆಯ್ತು. ಎಲ್ಲಿ ನೀನ್ ಕಾಣ್ತೆಲ್ಲವಲ್ಲ?' ಎಂದು ಅದೇ ಮೆಸೇಜಿನಲ್ಲಿ ಸೇರಿಸಿದ್ದಳು. 'ಜಸ್ಟ್ ಗಿವ್ ಮಿ ಫೈವ್ ಮಿನಿಟ್ಸ್, ಐ ವಿಲ್ ಬಿ ದೇರ್ ಚಿನ್ನೂ' ಎಂಬ ಉತ್ತರ ಬಂತು. ಎರಡು ಸಾವಿರದ ಇಪ್ಪತ್ತೈದರ ಕಾರ್ತಿಕ ಮಾಸದ ಶುಭದಿನವೊಂದರ ಶುಭಲಗ್ನದಲ್ಲಿ ನಿಶ್ಚಯಗೊಂಡಿದ್ದ ತಮ್ಮ ಮದುವೆಯ ಪ್ರಯುಕ್ತ ಪ್ರೀವೆಡ್ಡಿಂಗ್ ಫೋಟೊಶೂಟ್ ಮಾಡಿಸಲೆಂದು ಸಹನಾ ಮತ್ತು ಸಮರ್ಥ್ ಆಯ್ದುಕೊಂಡ ಜಾಗ ವಿಚಿತ್ರವಷ್ಟೇ ಅಲ್ಲ ಭಯಾನಕವೂ ಆಗಿತ್ತು. ನಗರದ ಮಧ್ಯಭಾಗದಲ್ಲಿಯೇ ಇದ್ದೂ ಜನನಿಬಿಡವಾಗಿದ್ದ ಸ್ಮಶಾನವೊಂದರಲ್ಲಿ ಪ್ರೀವೆಡ್ಡಿಂಗ್ ಶೂಟ್ ಮಾಡಿಸಬೇಕೆಂಬ ಕ್ರೇಜಿ ಯೋಚನೆ ಸಮರ್ಥ್‌ನದ್ದಾಗಿತ್ತು.

ಮೊದಲು ಇದಕ್ಕೆ ಸುತಾರಾಂ ಒಪ್ಪದ ಸಹನಾ, ಇಂಥ ಇನ್ನೊವೇಟಿವ್ ಹುಡುಗನೊಬ್ಬ ತನ್ನ ಪಾರ್ಟ್ನರ್ ಆಗುತ್ತಿರುವ ಬಗ್ಗೆ ಪುಳಕಗೊಂಡು, ಈ ಫೋಟೊಗಳನ್ನು ತಾನು ಇನ್ಸ್‌ಸ್ಟಾಗ್ರಾಮ್, ವಾಟ್ಸಾಪ್ ಸ್ಟೇಟಸ್, ಥ್ರೆಡ್ಸ್, ಟ್ವಿಟರ್, ಸ್ನ್ಯಾಪ್‌ಚಾಟ್, ಫೇಸ್ ಬುಕ್ ಸ್ಟೋರಿಯಲ್ಲಿ ಹಾಕಿದಾಗ ಬರಬಹುದಾದ ಅಮೇಜಿಂಗ್ ರಿಯಾಕ್ಷನ್ ಮತ್ತು ಕಮೆಂಟ್‌ಗಳನ್ನು ನೆನೆದು ರೋಮಾಂಚನಗೊಂಡು ಒಪ್ಪಿಕೊಂಡಿದ್ದಳು. ಆದರೂ ಕತ್ತಲು ಮೂಡುವ ಹೊತ್ತಿನಲ್ಲಿ ಸ್ಮಶಾನದ ಮುಂದೆ ಬಂದಿಳಿದಾಗ ಸಣ್ಣದೊಂದು ಅಳುಕು ಅವಳಲ್ಲಿತ್ತು. ಮನೆಯಲ್ಲಿ ಹೇಳಿದರೆ ಈ ಕ್ರೇಜಿ ಐಡಿಯಾವನ್ನು ಯಾರೂ ಒಪ್ಪುತ್ತಿರಲಿಲ್ಲ ಮತ್ತು ಪ್ರೀವೆಡ್ಡಿಂಗ್ ಶೂಟ್‌ಗೆ ಅವರಿಬ್ಬರನ್ನೇ ಕಳಿಸಿಕೊಡುವಂಥ ಸೋ ಕಾಲ್ಡ್ ಫಾರ್ವರ್ಡ್ ಕುಟುಂಬಗಳೂ ಅವರಿಬ್ಬರದ್ದಾಗಿರಲಿಲ್ಲ. ಹಾಗಾಗಿ ಮನೆಯಲ್ಲಿ ಯಾರಿಗೂ ಹೇಳದೆ, ಆಫೀಸಿನವರು ವೀಕೆಂಡ್ ಫನ್ ಇವೆಂಟ್ ಅನ್ನು ತಡರಾತ್ರಿಯವರೆಗೆ ನಗರದ ಹೊರವಲಯದಲ್ಲಿರುವ ರೆಸಾರ್ಟ್‌ನಲ್ಲಿ ಆಯೋಜಿಸಿರುವುದಾಗಿ ಇಬ್ಬರೂ ಮನೆಗಳಲ್ಲಿ ತಿಳಿಸಿ ಹೊರಟು ಬಂದಿದ್ದರು. ಕಾಯುತ್ತಿದ್ದ ಸಹನಾಳನ್ನು ಸಮರ್ಥ್ ಕೂಡ ಸೇರಿಕೊಂಡ ಮೇಲೆ ಇಬ್ಬರೂ ಸ್ಮಶಾನದ ಒಳಗೆ ಹೋದರು. ಕಾವಲುಗಾರನಿಗೆ ಯಾವುದೋ ಒಂದು ಡಾಕ್ಯುಮೆಂಟರಿಗಾಗಿ ಶೂಟ್ ಮಾಡುವುದಾಗಿಯೂ, ಇದಕ್ಕೆ ಲೋಕಲ್ ಎಮ್. ಎಲ್.ಎ. ಅವರ ಪ್ರೋತ್ಸಾಹ ಇದೆಯೆಂದು ಸುಳ್ಳು ಹೇಳಿ ಒಂದೆರಡು ತಾಸಿನಲ್ಲಿ ಹಿಂದಿರುಗುವುದಾಗಿಯೂ ಹೇಳಿ ಆತನನ್ನು ಸಾಗಹಾಕಿದರು.

**'We Preserve Memories'** ಎಂಬ ಏಜೆನ್ಸಿಯವರು ಈಗಾಗಲೇ ಇವರ ಮದುವೆಗೆ ಸಂಬಂಧಪಟ್ಟ ಎಲ್ಲಾ ಫೋಟೊ ಮತ್ತು ವಿಡಿಯೊದ ಕಾಂಟ್ರಾಕ್ಟ್ ಪಡೆದಿದ್ದರು. ಇನ್ನೊಂದು ಕಾರ್ಯಕ್ರಮಕ್ಕೆ ಹೋಗಿದ್ದ ಆ ತಂಡ, ಇಲ್ಲಿಗೆ ಹೊರಟಿರುವುದಾಗಿಯೂ, ಬರುವುದು ಸ್ವಲ್ಪ ತಡವಾಗುವುದಾಗಿಯೂ ಸಮರ್ಥ್‌ಗೆ ತಿಳಿಸಿತ್ತು. ಅವರು ಬರುವ ತನಕ ತಾವು ಒಂದಷ್ಟು ಖಾಸಗಿ ಮಾತುಗಳನ್ನಾಡಬಹುದೆಂದು ಇಬ್ಬರೂ ಅಂದುಕೊಂಡರು. ಎಂಗೇಜ್ಮೆಂಟ್ ಆದಾಗಿನಿಂದಲೂ ತಡರಾತ್ರಿಯವರೆಗೆ ಮೆಸೇಜು, ಕಾಲ್‌ಗಳಲ್ಲಿ ಮಾತನಾಡದ ಯಾವುದಾದರೂ ವಿಷಯ ಇದ್ದರೆ ಆ ಬಗ್ಗೆ ಮಾತನಾಡೋಣ ಎಂದು ಸಮರ್ಥ್ ತಮಾಷೆಯಾಗಿ ಹೇಳಿದ. ಸಹನಾ ಕೂಡ **that's funny** ಎಂದು ನಕ್ಕಳು. ಅಲ್ಲದೆ, ತಾನೇ ಆ ಮಾತುಕತೆಯನ್ನು ಒಂದು ಪ್ರಶ್ನೆಯೊಂದಿಗೆ ಆರಂಭಿಸಿದಳು. 'ಅವೊತ್ತು ನೀವೆಲ್ಲ ನನ್ನ ನೋಡಾಕ್ ಬಂದಾಗ ನಮ್ಮಿಬ್ರನ್ನೇ